**ಕರ್ನಾಟಕ ವಿಧಾನ ಪರಿಷತ್ತು**

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1538
2. ಮಾನ್ಯ ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 17.03.2026
4. ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ಕಬ್ಬು ಬೆಳೆಯುತ್ತಿರುವ ಒಟ್ಟು ಹೆಕ್ಟೇರ್ ವಿಸ್ತೀರ್ಣ ಎಷ್ಟು;</td><td>ಜಂಟಿ ನಿರ್ದೇಶಕರು, ಕೃಷಿ ಅಂಕಿ ಅಂಶಗಳ ವಿಭಾಗ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರು ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 38675.26 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯನ್ನು ಬೆಳೆಯಲಾಗುತ್ತಿದೆ ಎಂದು ವರದಿ ಮಾಡಿರುತ್ತಾರೆ.</td></tr>
<tr><td>ಆ)</td><td>ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ ಕಬ್ಬು ಬೆಳೆಯುವ ಪ್ರದೇಶ ಮತ್ತು ಇಳುವರಿಯಲ್ಲಿ (Yield per Hectare) ಕಂಡು ಬಂದಿರುವ ಬದಲಾವಣೆಗಳೇನು;</td><td>ಜಂಟಿ ನಿರ್ದೇಶಕರು, ಕೃಷಿ ಅಂಕಿ ಅಂಶಗಳ ವಿಭಾಗ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರು ಕಲಬುರಗಿ ಜಿಲ್ಲೆಯ ವ್ಯಾಪ್ತಿಯಲ್ಲಿನ ತಾಲ್ಲೂಕುವಾರು ಕಬ್ಬಿನ ಬೆಳೆಯ ಪ್ರದೇಶದ ಮಾಹಿತಿಯನ್ನು ಸಲ್ಲಿಸಿರುತ್ತಾರೆ. ತಾಲೂಕು ಮತ್ತು ವರ್ಷವಾರು ಕಬ್ಬಿನ ಬೆಳೆಯ ಪ್ರದೇಶದ ಕುರಿತು ಈ ಕೆಳಗಿನಂತೆ ವರದಿ ಸಲ್ಲಿಸಿರುತ್ತಾರೆ.<br>(ವಿಸ್ತೀರ್ಣ :ಹೆಕ್ಟರ್ ಗಳಲ್ಲಿ)
<table>
<tr><th>ಕ್ರ. ಸಂ</th><th>ತಾಲೂಕು</th><th>2022-23</th><th>2023-24</th><th>2024-25</th></tr>
<tr><td>1</td><td>ಅಫಜಲಪುರ</td><td>34905.58</td><td>26306.29</td><td>12785.14</td></tr>
<tr><td>2</td><td>ಆಳಂದ</td><td>9464.59</td><td>8264.22</td><td>3151.83</td></tr>
<tr><td>3</td><td>ಚಿಂಚೋಳಿ</td><td>1897.34</td><td>2293.32</td><td>2653.3</td></tr>
<tr><td>4</td><td>ಚಿತ್ತಾಪುರ</td><td>820.02</td><td>1115.28</td><td>788.61</td></tr>
<tr><td>5</td><td>ಜೇವರ್ಗಿ</td><td>11171.73</td><td>7011.94</td><td>3591.84</td></tr>
<tr><td>6</td><td>ಗುಲ್ಬರ್ಗಾ</td><td>6826.81</td><td>7488.72</td><td>4561.06</td></tr>
<tr><td>7</td><td>ಕಲಗಿ</td><td>619.22</td><td>983.66</td><td>1036.91</td></tr>
<tr><td>8</td><td>ಕಮಲಾಪುರ</td><td>1851.34</td><td>2078.86</td><td>1716.61</td></tr>
<tr><td>9</td><td>ಸೇಡಂ</td><td>283.86</td><td>489.87</td><td>310.58</td></tr>
<tr><td>10</td><td>ಶಹಬಾದ್</td><td>430.64</td><td>350.64</td><td>585.72</td></tr>
<tr><td>11</td><td>ಯಡ್ರಾಮಿ</td><td>6167.95</td><td>4073.59</td><td>2986.86</td></tr>
<tr><td></td><td>ಒಟ್ಟು</td><td>74439.08</td><td>60456.39</td><td>34168.46</td></tr>
</table>
ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಇ)</td><td>ಜಿಲ್ಲೆಯ ರೈತರಿಗೆ ಅಧಿಕ ಇಳುವರಿ ಮತ್ತು ಹೆಚ್ಚಿನ ಸಕ್ಕರೆ ಅಂಶ (High Recovery) ನೀಡುವ ಸುಧಾರಿತ ಕಬ್ಬು ತಳಿಗಳನ್ನು (ಉದಾ:Co-86032, Co-11015) ಪೂರೈಸಲು ಸರ್ಕಾರ ಅಥವಾ ಸಕ್ಕರೆ ಕಾರ್ಖಾನೆಗಳು ಕೈಗೊಂಡಿರುವ ಕ್ರಮಗಳೇನು;</td><td>ಕಲಬುರಗಿ ಜಿಲ್ಲೆಯ ರೈತರಿಗೆ ಕಬ್ಬಿನಲ್ಲಿ ಅಧಿಕ ಇಳುವರಿ ಪಡೆಯಲು "Budget para 39" ರಡಿ ಹಾಗೂ - ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ "SMARTCANE" Project ಅನುಷ್ಠಾನ ಮಾಡಲಾಗುತ್ತಿದೆ ಎಂದು ಉಪ ನಿರ್ದೇಶಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಕಲಬುರಗಿ ಇವರು ವರದಿ ಮಾಡಿರುತ್ತಾರೆ.<br>ಮುಂದುವರೆದು, ರಾಜ್ಯ ಸರ್ಕಾರಿ ಸ್ವಾಮ್ಯದ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರ ವತಿಯಿಂದ ರೈತರಿಗೆ ಉತ್ತಮ ಗುಣಮಟ್ಟದ ಕಬ್ಬಿನ ತಳಿಗಳ ಬೀಜವನ್ನು ಪೂರೈಕೆ ಮಾಡುವ ಸಲುವಾಗಿ ಅಂಗಾಂಶ ಕೃಷಿ ಪ್ರಯೋಗಾಲಯವನ್ನು ಸ್ಥಾಪಿಸಿದ್ದು-</td></tr>
</table>

ಸದರಿ ಪ್ರಯೋಗಲಯದಿಂದ ಸಿ.ಒ. 86032, ಸಿ.ಒ.11015, ಸಿ.ಒ.ಸಿ 671, ಸಿಒ.18061 ಇತ್ಯಾದಿ ತಳಿಗಳ, ಅಂಗಾಂಶ ಕೃಷಿ ಮುಖಾಂತರ ಸಸಿಗಳನ್ನು ತಯಾರಿಸಿ ಸಕ್ಕರೆ ಕಾರ್ಖಾನೆ ಹಾಗೂ ರೈತರಿಗೆ ರಿಯಾಯತಿ ದರದಲ್ಲಿ ಉತ್ತಮ ಗುಣಮಟ್ಟದ ಬೀಜೋತ್ಪಾದನೆಗಾಗಿ ವಿತರಿಸಲಾಗುತ್ತಿದೆ. ಅದರಂತೆ ಸಂಸ್ಥೆಯ ಫಾರಂಗಳಲ್ಲಿ 03 ಹಂತದ ಬೀಜೋತ್ಪಾದನೆ ಕೈಗೊಂಡು (ಫೌಂಡೇಶನ ಬೀಜ 02 ಹಂತದಲ್ಲಿ & ಪ್ರಮಾಣೀಕೃತ ಬೀಜ) ರೈತರಿಗೆ & ಕಾರ್ಖಾನೆಗಳಿಗೆ ಕಬ್ಬಿನ ಬೀಜವನ್ನು ಪೂರೈಕೆ ಮಾಡಲಾಗುತ್ತಿದೆ.

ಇದಲ್ಲದೇ, ಕರ್ನಾಟಕ ರಾಜ್ಯ ವ್ಯಾಪ್ತಿ ರೈತರಿಂದ ಹಾಗೂ ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆ ಅಭಿವೃದ್ಧಿ ಕುರಿತು ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳಲು ಬೇಡಿಕೆಯನುಸಾರ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಿಂದ ತಜ್ಞರನ್ನು ನಿಯೋಜಿಸಿ ರೈತರಿಗೆ ಕಬ್ಬು ಉತ್ಪಾದನೆ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಸ್ತರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಅದರಂತೆ ರಾಜ್ಯವ್ಯಾಪ್ತಿ ರೈತರಿಗೆ ಹಾಗೂ ಕಾರ್ಖಾನೆ ಸಿಬ್ಬಂದಿಯವರಿಗೆ ಸಂಸ್ಥೆಯಿಂದ 2025-26 ಹಂಗಾಮಿಗೆ 50 ಕ್ಕೂ ಹೆಚ್ಚು ವಿಸ್ತರಣಾ ಚಟಿವಟಿಕೆಗಳನ್ನು ಕೈಗೊಳ್ಳಲಾಗಿರುತ್ತದೆ. ಇದರಿಂದ 5000ಕ್ಕೂ ಹೆಚ್ಚು ರೈತರು ಭಾಗವಹಿಸಿ ಸಂಸ್ಥೆಯಿಂದ ಸದುಪಯೋಗ ಪಡೆದಿರುತ್ತಾರೆ. ಇದರಂತೆ ಸಂಸ್ಥೆಯು ಕೃಷಿ ಇಲಾಖೆ ಸಂಯೋಗದಲ್ಲಿ ಅಂತರಜಾಲ ಮುಖಾಂತರ ಕಾರ್ಯಕ್ರಮ ಆಯೋಜಿಸಿ 6000ಕ್ಕೂ ಹೆಚ್ಚು ರೈತರಿಗೆ ಕಬ್ಬು ಬೆಳೆ ಸಂಬಂಧಿತ ತರಬೇತಿಯನ್ನು ನೀಡಲಾಗಿರುತ್ತದೆ.

**ಸಂಸ್ಥೆಯಿಂದ ಕಬ್ಬು ಅಭಿವೃದ್ಧಿ ಸಂಬಂಧಿಸಿದಂತೆ ತರಬೇತಿ ನೀಡಿದ ವಿಷಯಗಳು** :

1. ಹೊಸ ಕಬ್ಬಿನ ತಳಿಗಳು ಹಾಗೂ ಅವುಗಳ ಪ್ರಾಮುಖ್ಯತೆ.
2. ಮೂರು ಹಂತದ ಬೀಜೋತ್ಪಾದನೆ ಮತ್ತು ಬೀಜೋಪಚಾರದ ಮಹತ್ವ
3. ಅಂಗಾಂಶ ಕೃಷಿಯ ಮಹತ್ವ.
4. ಬರ ನಿರ್ವಹಣೆ ಮತ್ತು ಮಾರ್ಗೋಪಾಯಗಳು.
5. ರವದೆ ಮತ್ತು ತ್ಯಾಜ್ಯ ನಿರ್ವಹಣೆ ಹಾಗೂ ಅವುಗಳ ಪ್ರಾಮುಖ್ಯತೆ.
6. ಕಬ್ಬಿನ ಬೆಳೆಯಲ್ಲಿ ಕೀಟ ಮತ್ತು ರೋಗ ನಿರ್ವಹಣೆ.
7. ಕಬ್ಬಿನ ಬೆಳೆಯಲ್ಲಿ ಕಳೆ ನಿರ್ವಹಣಾ ಕ್ರಮಗಳು.
8. ನೀರು ಮತ್ತು ಪೋಷಕಾಂಶಗಳ ನಿರ್ವಹಣೆ.
9. ಸುಸ್ಥಿರ ಮಣ್ಣಿನ ಫಲವತ್ತತೆಯಿಂದ ಅಧಿಕ ಇಳುವರಿಯ ಮಾರ್ಗೋಪಾಯಗಳು.
10. ಮಣ್ಣು ಪರೀಕ್ಷೆ ಮತ್ತು ಅದರಿಂದಾಗುವ ಉಪಯೋಗಗಳು.
11. ಸಾವಯವ ಕೃಷಿಯ ಪ್ರಾಮುಖ್ಯತೆ.
12. ಜೈವಿಕ ಗೊಬ್ಬರಗಳ ಮತ್ತು ಜೈವಿಕ ಪೀಡೆ ನಾಶಕಗಳ ಮಹತ್ವ.
13. ಕುಳೆ ಬೆಳೆ ನಿರ್ವಹಣೆ.
14. ಅಗಲು ಸಾಲು ಪದ್ಧತಿಯಿಂದ ಆಗುವ ಉಪಯೋಗಗಳು.
15. ಹನಿ ನೀರಾವರಿ ಮಹತ್ವ ಮತ್ತು ಕೃಷಿ ಯಾಂತ್ರೀಕರಣ. ಹಸಿರೆಲೆ ಗೊಬ್ಬರ ಮತ್ತು ಅಂತರ ಬೆಳೆ ಮಹತ್ವ.

<table>
<tr><td>ಈ)</td><td>ಕಬ್ಬಿನ ಉತ್ಪಾದಕತೆ ಹೆಚ್ಚಿಸಲು ಮತ್ತು ವೈಜ್ಞಾನಿಕ ಬೇಸಾಯ ಪದ್ಧತಿಗಳ ಬಗ್ಗೆ ರೈತರಿಗೆ ಕೃಷಿ ವಿಜ್ಞಾನ ಕೇಂದ್ರಗಳ (KVK) ಮೂಲಕ ವಿಶೇಷ ತಾಂತ್ರಿಕ ತರಬೇತಿ ಹಾಗೂ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳಲಾಗಿದೆಯೇ;</td><td>ಕಲಬುರಗಿ ಜಿಲ್ಲೆಯಲ್ಲಿ ಕಬ್ಬಿನ ಉತ್ಪಾದನೆ ಹೆಚ್ಚಿಸಲು ಮತ್ತು ವೈಜ್ಞಾನಿಕ ಬೇಸಾಯ ಪದ್ಧತಿಗಳ ಬಗ್ಗೆ ಅರಿವು ಮೂಡಿಸಲು ರೈತರಿಗೆ ಧಾರವಾಡ ಕೃಷಿ ಮೇಳಕ್ಕೆ ಕಳುಹಿಸಲಾಗಿರುತ್ತದೆ. ಮುಂದುವರೆದು, ಕೃಷಿ ಇಲಾಖೆ ಹಾಗೂ ಕೃಷಿ ವಿಜ್ಞಾನಿಗಳೊಂದಿಗೆ ಜಿಲ್ಲಾಮಟ್ಟದ ಕಾರ್ಯಗಾರವನ್ನು ಕೃಷಿ ಮಹಾವಿದ್ಯಾಲಯ, ಕಲಬುರಗಿ ಇಲ್ಲಿ ಆಯೋಜಿಸಲಾಗಿತ್ತು. ಅಲ್ಲದೆ ಸೇಡಂ ಉಪ ವಿಭಾಗದ ಸೇಡಂ, ಚಿತ್ತಾಪೂರ ಮತ್ತು ಚಿಂಚೋಳಿ ತಾಲ್ಲೂಕಿನ ರೈತರಿಗೆ ಸೇಡಂನಲ್ಲಿ ಕಬ್ಬಿನಲ್ಲಿ ನವೀನ ತಾಂತ್ರಿಕತೆ ಕುರಿತು ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿರುತ್ತದೆ.</td></tr>
<tr><td>ಉ)</td><td>ಈ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಸಕ್ಕರೆ ಕಾರ್ಖಾನೆಗಳ ಕಬ್ಬು ತೂಕ ಮಾಪನ ಕೇಂದ್ರಗಳಲ್ಲಿ (WEIGHBRIDGES) ಪಾರದರ್ಶಕತೆ ಕಾಯ್ದುಕೊಳ್ಳಲು ಮತ್ತು ತೂಕದಲ್ಲಿ ಆಗುವ ಅವ್ಯವಹಾರ ತಡೆಗಟ್ಟಲು 'ಡಿಜಿಟಲ್ ವೇ-ಬ್ರಿಡ್ಜ್' ಅಳವಡಿಕೆ ಕಡ್ಡಾಯಗೊಳಿಸಲಾಗಿದೆಯೇ;</td><td>ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ ಇವರು ವರದಿ ನೀಡಿರುವಂತೆ ಕಲಬುರಗಿ ಜಿಲ್ಲೆಯ ಐದು ಸಕ್ಕರೆ ಕಾರ್ಖಾನೆಗಳ ಕಬ್ಬು ತೂಕ ಮಾಪನ ಕೇಂದ್ರಗಳಲ್ಲಿ (WEIGHBRIDGES) ಪಾರದರ್ಶಕತೆ ಕಾಯ್ದುಕೊಳ್ಳಲು ಮತ್ತು ತೂಕದಲ್ಲಿ ಆಗುವ ಅವ್ಯವಹಾರ ತಡೆಗಟ್ಟಲು ವೇ-ಬ್ರಿಡ್ಜ್ ಅಳವಡಿಕೆ ಕಡ್ಡಾಯಗೊಳಿಸಲಾಗಿದೆ.<br><br>ಕಲಬುರಗಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ವಿವರ
<table>
<tr><th>ಕ್ರ. ಸಂ.</th><th>ಸಕ್ಕರೆ ಕಾರ್ಖಾನೆಗಳ ಹೆಸರು ಮತ್ತು ವಿಳಾಸ</th><th>ಲೋಡ್ ಸೆಲ್</th></tr>
<tr><td>1</td><td>ಕೆಪಿಆರ್ ಶುಗರ್ & ಅಪ್ಪರೆಲ್ಸ್ ಲಿ, ಚಿನ್ನಮ್ಮಗೆರಿ ಗ್ರಾಮ, ಚೌಡಾಪೂರ, ಅಫಜಲಪೂರ ತಾಲ್ಲೂಕು, ಕಲಬುರಗಿ ಜಿಲ್ಲೆ.</td><td>ಡಿಜಿಟಲ್ ಲೋಡ್ ಸೆಲ್</td></tr>
<tr><td>2</td><td>ಎನ್‌ಎಸ್‌ಎಲ್ ಶುಗರ್ಸ್ (ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆ ಗುತ್ತಿಗೆದಾರರು) ಭೂಸನೂರ್, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.</td><td>ಡಿಜಿಟಲ್ ಲೋಡ್ ಸೆಲ್</td></tr>
<tr><td>3</td><td>ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್, ಯುನಿಟ್-5, ಹವಳಗಾ ಗ್ರಾಮ, ಅಫ್ಜಲಪೂರ ತಾಲ್ಲೂಕು, ಕಲಬುರಗಿ ಜಿಲ್ಲೆ.</td><td>ಡಿಜಿಟಲ್ ಲೋಡ್ ಸೆಲ್</td></tr>
<tr><td>4</td><td>ದಿ ಉಗಾರ್ ಶುಗರ್ ವರ್ಕ್ಸ್ ಲಿ, ನಾಗರಹಳ್ಳಿ ಮಲ್ಲಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ.</td><td>ಡಿಜಿಟಲ್ ಲೋಡ್ ಸೆಲ್</td></tr>
<tr><td>5</td><td>ಸಿದ್ಧಸಿರಿ ಸೌಹಾರ್ದ ಸಹಕಾರಿ ನಿಯಮಿತ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ.</td><td>ಡಿಜಿಟಲ್ ಲೋಡ್ ಸೆಲ್</td></tr>
</table></td></tr>
<tr><td>ಊ)</td><td>ಜಿಲ್ಲೆಯ ಅರೆ-ಶುಷ್ಕ ಹವಾಮಾನದಲ್ಲಿ ನೀರಿನ ಮಿತಬಳಕೆಗಾಗಿ ಕಬ್ಬು ಬೆಳೆಗೆ "ಹನಿ ನೀರಾವರಿ" (Drip Irrigation) ಅಳವಡಿಸಿಕೊಳ್ಳಲು ಸರ್ಕಾರ ನೀಡುತ್ತಿರುವ ವಿಶೇಷ ಸಹಾಯಧನ ಎಷ್ಟು ಮತ್ತು ಈ ಯೋಜನೆಯಡಿ ಬಾಕಿ ಇರುವ ಅರ್ಜಿಗಳ ವಿಲೇವಾರಿಗೆ ಕೈಗೊಂಡ ಕ್ರಮಗಳೇನು?</td><td>ಕಲಬುರಗಿ ಜಿಲ್ಲೆಯ 250.00 ಹೆಕ್ಟೇರ್ ಕಬ್ಬು ಬೆಳೆಯ ಪ್ರದೇಶದಲ್ಲಿ ನೀರಿನ ಮಿತಬಳಕೆಗಾಗಿ "ಹನಿ ನೀರಾವರಿ" (Drip Irrigation) ಅಳವಡಿಸಲು ರೂ.162.50 ಲಕ್ಷಗಳ ಸಹಾಯಧನ ನೀಡಲಾಗಿದೆ ಎಂದು ಉಪ ನಿರ್ದೇಶಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಕಲಬುರಗಿ ಇವರು ವರದಿ ಮಾಡಿರುತ್ತಾರೆ.</td></tr>
</table>

**ಸಂಖ್ಯೆ:** ಸಿಐ 111 ಎಸ್‌ಜಿಎಫ್ 2026

(ಶಿವಾನಂದ ಎಸ್ ಪಾಟೀಲ್)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಅನುಬಂಧ.

2024-2025ನೇ ಸಾಲಿನ ಕಲಬುರಗಿ ಜಿಲ್ಲೆಯ ಕಬ್ಬು ಬೆಳೆಯ ಇಳುವರಿ ಮಾಹಿತಿ

| Sl.no | Taluk | Hobli | Crop | Irrigation_ Type | AverageYield PerHa |
|---|---|---|---|---|---|
| 1 | Chincholi | AINAPURA | Sugarcane | Irrigated | 98163.80 |
| 2 | Chincholi | CHINCHOLI | Sugarcane | Irrigated | 84384.00 |
| 3 | Chincholi | SULEPETA | Sugarcane | Irrigated | 90400.28 |
| 4 | Chittapur | CHITTAPURA | Sugarcane | Irrigated | 84000.00 |
| 5 | Chittapur | GUNDAGURTI | Sugarcane | Irrigated | 92416.00 |
| 6 | Chittapur | NALAVARA | Sugarcane | Irrigated | 75080.00 |
| 7 | Jevargi | ANDOLA | Sugarcane | Irrigated | 58060.00 |
| 8 | Jevargi | JEVARGI | Sugarcane | Irrigated | 39824.60 |
| 9 | Jevargi | NELOGI | Sugarcane | Irrigated | 49641.20 |
| 10 | Kalaburgi | AVARADA B | Sugarcane | Irrigated | 67591.60 |
| 11 | Kalaburgi | FARAHATABADA | Sugarcane | Irrigated | 117491.52 |
| 12 | Kalaburgi | GULABARGA | Sugarcane | Irrigated | 67488.00 |
| 13 | Kalaburgi | PATTANA | Sugarcane | Irrigated | 78260.80 |
| 14 | Kalagi | KALAGI | Sugarcane | Irrigated | 112640.00 |
| 15 | Kalagi | KODLI | Sugarcane | Irrigated | 98400.00 |
| 16 | KAMALAPURA | KAMALAPURA | Sugarcane | Irrigated | 55536.00 |
| 17 | KAMALAPURA | MAHAGANVA | Sugarcane | Irrigated | 71844.00 |
| 18 | Sedam | SEDAM | Sugarcane | Irrigated | 71840.00 |
| 19 | Shahabada | SHAHABADA | Sugarcane | Irrigated | 77600.00 |
| 20 | Yedrami | IJERI | Sugarcane | Irrigated | 53084.00 |
| 21 | Yedrami | YADRAMI | Sugarcane | Irrigated | 53173.20 |

ಜಂಟಿ ನಿರ್ದೇಶಕರು
ಬೆಳೆ ವಿಮಾ ಯೋಜನೆ ವಿಭಾಗ
ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
ಕರ್ನಾಟಕ ಸರ್ಕಾರ

## 2022-2023ನೇ ಸಾಲಿನ ಕಲಬುರಗಿ ಜಿಲ್ಲೆಯ ಕಬ್ಬು ಬೆಳೆಯ ಇಳುವರಿ ಮಾಹಿತಿ

| Sl.NO | Taluk | Hobli | Crop | Irrigation_ Type | AverageYield PerHa |
|---|---|---|---|---|---|
| 1 | Afzalpur | ATANURA | Sugarcane | Irrigated | 48134.80 |
| 2 | Afzalpur | KARAJAGI | Sugarcane | Irrigated | 107880 .00 |
| 3 | Chincholi | CHINCHOLI | Sugarcane | Irrigated | 62800 .00 |
| 4 | Jevargi | JEVARGI | Sugarcane | Irrigated | 93330.80 |
| 5 | Jevargi | NELOGI | Sugarcane | Irrigated | 97460 .00 |
| 6 | Yedrami | YADRAMI | Sugarcane | Irrigated | 95776 .00 |

## 2023-2024ನೇ ಸಾಲಿನ ಕಲಬುರಗಿ ಜಿಲ್ಲೆಯ ಕಬ್ಬು ಬೆಳೆಯ ಇಳುವರಿ ಮಾಹಿತಿ

| Sl.no | Taluk | Hobli | Crop | Irrigation_ Type | AverageYield PerHa |
|---|---|---|---|---|---|
| 1 | Afzalpur | ATANURA | Sugarcane | Irrigated | 66202.00 |
| 2 | Afzalpur | KARAJAGI | Sugarcane | Irrigated | 59444.84 |
| 3 | Chincholi | CHINCHOLI | Sugarcane | Irrigated | 63584.00 |
| 4 | Jevargi | JEVARGI | Sugarcane | Irrigated | 47460.00 |
| 5 | Jevargi | NELOGI | Sugarcane | Irrigated | 46880.00 |
| 6 | Yedrami | YADRAMI | Sugarcane | Irrigated | 58340.00 |

ಜಂಟಿ ನಿರ್ದೇಶಕರು
ಬೆಳೆ ವಿಮಾ ಯೋಜನೆ ವಿಭಾಗ
ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
ಕರ್ನಾಟಕ ಸರ್ಕಾರ, ಬೆಂಗಳೂರು